ದಿನಾಂಕಃ **8.6.2026** ರಂದು ಪ್ರಮಾಣವಚನ ಬೋಧಿಸಲಾಯಿತು**.**

ಃಃ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ ಃಃ

ನಾನು ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದು, ಪ್ರಮಾಣಪತ್ರದಲ್ಲಿ ಹೇಳಿರುವ ಸಂಗತಿಗಳೆಲ್ಲವೂ ಸತ್ಯವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ. ಪ್ರಮಾಣಪತ್ರವನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸದರಿ ಪ್ರಕರಣದಲ್ಲಿ ನಾನು ಹಾಜರುಪಡಿಸಿರುವ ದಾಖಲೆಗಳನ್ನು ಈಗ ನೋಡುತ್ತಿದ್ದೇನೆ, ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

| ಕ್ರಮ ಸಂಖ್ಯೆಃ | ದಾಖಲೆಗಳು | ನಿಶಾನೆಗಳು |
|---|---|---|
| 1 | ದಿನಾಂಕಃ 20.12.2025 ರ ಶಾಲಾ ದಾಖಲಾತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು | ನಿಪಿ-1 |
| 2 | ದಿನಾಂಕಃ 20.12.2025 ರ ಪ್ರೌಢಶಾಲೆಯ ಶಾಲಾ ದಾಖಲಾತಿಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು | ನಿಪಿ-2 |
| 3 | ಶಾಲಾ ವರ್ಗಾಗಣೆ ಪತ್ರದ ನೋಟರೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು (ಮೂಲ ದಾಖಲೆಯೊಂದಿಗೆ ಪರಿಶೀಲಿಸಿ ಮೂಲ ದಾಖಲೆಯನ್ನು ಹಿಂದಿರುಗಿಸಲಾಯಿತು ) | ನಿಪಿ-3 |
| 4 | ನನ್ನ ಆಧಾರ್ ಕಾರ್ಡಿನ ನೋಟರೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು (ಮೂಲ ದಾಖಲೆಯೊಂದಿಗೆ ಪರಿಶೀಲಿಸಿ ಮೂಲ ದಾಖಲೆಯನ್ನು ಹಿಂದಿರುಗಿಸಲಾಯಿತು ) | ನಿಪಿ-4 |
| 5 | ವಕೀಲರ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು | ನಿಪಿ-5 |
| 6 | ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ | ನಿಪಿ-6 ರಿಂದ 10 |
| 7 | ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ | ನಿಪಿ-11 ರಿಂದ 15 |

ಆದುದರಿಂದ ದಾವೆಯಲ್ಲಿ ಕೋರಿಕೊಂಡಂತೆ ದಾವೆಯನ್ನು ಡಿಕ್ರಿ ಮಾಡಿಕೊಡಬೇಕೆಂದು ಕೋರಿಕೊಳ್ಳುತ್ತೇನೆ.

.

O.S.No.24/2026 PW1

<u>ಪಾಟೀ ಸವಾಲು ಃ ಪ್ರತಿವಾದಿಗಳ ಪರ  ಮಾನ್ಯ ಎ ಜಿ ಪಿಯವರಿಂದಃ</u>

ನನ್ನನ್ನು ಶಾಲೆಗೆ ದಾಖಲು ಮಾಡುವಾಗ ನನ್ನ ಮತ್ತು ನನ್ನ ತಂದೆಯ ಹೆಸರನ್ನು ನನ್ನ ತಂದೆ-ತಾಯಿಯವರು ಸರಿಯಾಗಿಯೇ ಬರೆದು ನೀಡಿರುತ್ತಾರೆ ಎಂದರೆ ಸಾಕ್ಷಿಯು ನನ್ನ ತಂದೆ-ತಾಯಿ ನನ್ನ ಶೈಕ್ಷಣಿಕ ದಾಖಲೆಗಳಲ್ಲಿ ನನ್ನ ಹೆಸರನ್ನು SAJU A A ಎಂದು ಮತ್ತು ನನ್ನ ತಂದೆಯ ಹೆಸರನ್ನು ABRAHAM ಎಂದು ಸರಿಯಾಗಿಯೇ ನೀಡಿದ್ದರೂ ಸಹ ಪ್ರತಿವಾದಿಗಳು ನನ್ನ ಶೈಕ್ಷಣಿಕ ದಾಖಲೆಗಳಲ್ಲಿ ನನ್ನ ಹೆಸರನ್ನು K. SAJU ಎಂದು ಮತ್ತು ನನ್ನ ತಂದೆಯ ಹೆಸರನ್ನು KURIYA KOS ಎಂದು ತಪ್ಪಾಗಿ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳ ಯಾವುದೇ ತಪ್ಪು ಅಥವಾ ನಿರ್ಲಕ್ಷತನದಿಂದ ನನ್ನ ಮತ್ತು ನನ್ನ ತಂದೆಯ ಹೆಸರು ನನ್ನ ಶೈಕ್ಷಣಿಕ ದಾಖಲೆಗಳಲ್ಲಿ ತಪ್ಪಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ನನ್ನ ಮತ್ತು ನನ್ನ ತಂದೆಯ ಹೆಸರು ನನ್ನ ಶೈಕ್ಷಣಿಕ ದಾಖಲೆಗಳಲ್ಲಿ ತಪ್ಪಾಗಿ ನಮೂದಾಗಿರುವ ವಿಷಯ ಕಳೆದ ವರ್ಷ ತಿಳಿಯಿತು. ನಾನು ದಾವೆಯಲ್ಲಿ ಕೋರಿರುವಂತೆ ಪರಿಹಾರ ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಃಮರುವಿಚಾರಣೆ ಇಲ್ಲಃ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸ ಇ ಎ ಒ

Sd/-
ಪ್ರ.ದ.ನ್ಯಾ.ದಂಃ ನ.ರಾ.ಪುರ.

ಸಾಕ್ಷಿ ಸಹಿಃ